ಜಯ ಮಂಗಳಂ - ಕುರುರಾಯ ಸಭೆಯೊಳಗೆ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 197.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 260.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.
4. **Note:** The lyrics in both the above references are same and the singer has followed these lyrics.

ರಾಗ: ಶ್ರೀ ತಾಳ: ಝಂಪೆ

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪ ॥

ಕುರುರಾಯ ಸಭೆಯೊಳಗೆ ಕುಳಿತು ದ್ರೌಪದಿಯನೆಳ-
ತರಿಸಿ ಭೀಷ್ಮಾದಿಕರು ನೋಡುತಿರಲು
ಸೆರಗನ್ನು ಹಿಡಿದು ಸೀರೆಯ ಸೆಳೆಯೆ ದ್ರೌಪದಿಯ
ಮೊರೆ ಕೇಳಿ ಕಾಯ್ದ ಶ್ರೀ ಮುರವೈರಿಗೆ ॥ ೧ ॥

ಪಾಪಿ ದುರ್ಯೋಧನನು ಪಾಂಡು ನಂದನರೊಡನೆ
ನೀ ಪಾಲು ಕೊಡುಯೆಂದು ಕೇಳಲಾಗಿ
ಕೋಪದಲಿ ಕೊಡೆನೆನಲು ಇಳೆಯಲೊರಗಿಸಿ ವಿಶ್ವ-
ರೂಪವನು ತೋರಿಸಿದ ಗೋಪಾಲಗೆ ॥ ೨ ॥

ವಸುಧೀಶ ಧರ್ಮಜನ ಓಲಗದಿ ತಾನಿರಲು
ಶಿಶುಪಾಲ ನಿಂದಿಸಲು ಶೀಘ್ರದಿಂದ
ಅಸಮಾನ ಚಕ್ರದಲಿ ಅವನ ತಲೆ ಖಂಡಿಸಿದ
ವಾಸುದೇವ ದೇವಕಿ ವರಪುತ್ರಗೆ ॥ ೩ ॥

ಗರುಡ ವಾಹನವೇರಿ ತೆರಳಿ ಶೋಣಿತ ಪುರಕೆ

ಹರ-ಭಕ್ತ ಬಾಣಾಸುರನ ಕರಗಳ
ತೆರೆದಿಟ್ಟು ಹರುಷದಲಿ ತನ್ನ ಮೊಮ್ಮನ ಕಾಯ್ದ
ಉರಗಾತ್ಮಭೂ ಸಕಲ ಸುರರೊಡೆಯಗೆ ॥ ೪ ॥

ಸುರ-ಗಿರಿಯ ಸುತ್ತುವ ತರಣಿ ನಂದನನ ಆ –
ಉರಗ ಬಾಣಕೆ ತನ್ನ ಪಾಂಡು ನಂದನನು
ಗುರಿಯಾಗದಂತೆ ಸತ್ಕರುಣದಲಿ ರಕ್ಷಿಸಿದ
ವರ-ಮೂರ್ತಿ ಶ್ರೀ ಪುರಂದರ ವಿಠ್ಠಲಗೆ ॥ ೫ ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಒಂದನೇ ನುಡಿಯಲ್ಲಿ ಮಹಾಭಾರತದ ಸಭಾ ಪರ್ವದಲ್ಲಿ ದ್ರೌಪದಿಯ ವಸ್ತ್ರಾಪ ಹರಣದ ಪ್ರಸಂಗದ ವಿವರಣೆ ಇದೆ.

ಮುರವೈರಿ = ಮುರ ಎಂಬ ಅಸುರನನ್ನು ಕೊಂದವ, ಶ್ರೀ ಕೃಷ್ಣ

ಧರ್ಮಜ = ಧರ್ಮರಾಯ

ಎರಡನೇ ನುಡಿಯಲ್ಲಿ ಮಹಾಭಾರತದ ಉದ್ಯೋಗ ಪರ್ವದಲ್ಲಿಯ ಶ್ರೀ ಕೃಷ್ಣ ಸಂಧಾನ ಪ್ರಸಂಗದ ವಿವರಣೆ ಮತ್ತು ವಿಶ್ವ ರೂಪದ ಬಗ್ಗೆ ಇದೆ.

ಮೂರನೇ ನುಡಿಯಲ್ಲಿ ಸಭಾ ಪರ್ವದ ರಾಜಸೂಯ ಯಾಗದ ಸಂದರ್ಭದಲ್ಲಿ ನಡೆದ ಶಿಶುಪಾಲ ವಧೆಯ ಕಥೆಯ ವಿವರಣೆ ಇದೆ.

ಓಲಗ = ಅಗ್ರ ಪೂಜೆಗಾಗಿ ಕೂಡಿದ ವಿಚಾರ ಸಭೆ.

ನಾಲ್ಕನೇ ನುಡಿಯಲ್ಲಿ ಭಾಗವತ ದಶಮ ಸ್ಕಂದದಲ್ಲಿ ಬರುವ ಅನಿರುದ್ಧ ಬಂಧ ವಿಮೋಚನೆಯನ್ನು, ಬಾಣಾಸುರನ ಅಪಜಯ ವಿಚಾರವನ್ನು ಹೇಳಲಾಗಿದೆ.

ಶೋಣಿತ ಪುರ = ಬಾಣಾಸುರನ ರಾಜಧಾನಿ

ಬಾಣಾಸುರ : - ಇವನು ಬಲಿ ಚಕ್ರವರ್ತಿಯ ಹಿರಿಯ ಮಗ. ಮಹಾ ಶಿವ ಭಕ್ತ. ಶಿವನನ್ನು ತಾಂಡವದಿಂದ ಮೆಚ್ಚಿಸಿ ೧೦೦೦ ತೋಳುಗಳನ್ನು ಪಡೆದನು. ಇವನ ಮಗಳ ಹೆಸರು ಉಷೆ. ಇವಳು ಅನಿರುದ್ಧನನ್ನು ಪ್ರೀತಿಸುತ್ತಿದ್ದುದರಿಂದ, ಉಷೆಯ ಗೆಳತಿ ಚಿತ್ರರೇಖೆ ಅವನನ್ನು ಮಾಯೆಯಿಂದ ಶೋಣಿತಪುರಕ್ಕೆ ಎತ್ತಿಕೊಂಡು ಬರುವಳು. ಉಷೆಗೂ ಅನಿರುದ್ಧನಿಗೂ ಗಾಂಧರ್ವ ವಿವಾಹ ಗುಪ್ತವಾಗಿ ನಡೆಯುವುದು. ಈ ವಿಷಯ ತಿಳಿದಾಗ ಬಾಣಾಸುರನು ಸಿಟ್ಟಿನಿಂದ

ಅನಿರುದ್ಧನನ್ನು ಸೆರೆಯಲ್ಲಿಟ್ಟನು. ಶ್ರೀ ಕೃಷ್ಣನಿಗೆ ಇದು ಗೊತ್ತಾಗಲು ಶೋಣಿತಪುರಕ್ಕೆ ದಂಡೆತ್ತಿ ಬಂದು ಬಾಣಾಸುರನನ್ನು ಸೋಲಿಸಿ ಅವನಿಗೆ ಎರಡೇ ತೋಳುಗಳು ಉಳಿಯುವಂತೆ ಮಾಡಿದನು. (ಕನಕಬಾಸರ ಮೋಹನ ತರಂಗಿಣಿಯಲ್ಲಿ ಇದೇ ಕಥೆ ಬಂದಿದೆ)

ಮೊಮ್ಮ = ಅನಿರುದ್ಧ (ಪ್ರದ್ಯುಮ್ನನ ಮಗ)

ಉರಗ =ಶೇಷ

ಆತ್ಮಭೂ = ಬ್ರಹ್ಮ

ಐದನೇ ನುಡಿಯಲ್ಲಿ ಕರ್ಣನ ಸರ್ಪಾಸ್ತ್ರಕ್ಕೆ ಅರ್ಜುನನು ಗುರಿಯಾಗದಂತೆ ಶ್ರೀ ಕೃಷ್ಣನು ಕಾಯ್ದ ಕಥೆ ಬಂದಿದೆ.

ಸುರಗಿರಿ = ಮೇರು

ತರಣಿ ನಂದನ = ಕರ್ಣ

ಉರಗ ಬಾಣ = ಸರ್ಪಾಸ್ತ್ರ

ಪಾಂಡು ನಂದನ = ಅರ್ಜುನ

Classification: Keerthane
Ankita: purandara vittala
Location: NA
Category: Mangala Song, Krishna Stuti, Mahatmya Gnana.
Sub-Category: Krishna, pandava, kourava, draupadi, asura, shesha, uraga, Papa, sabhe, bhishma, sittu, bhumi, Gopala, shishupala, chakra, garuda, santosha, brahma, Parvata, karuna,
Pravachana: NA
Explanation: NA